**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ).**
**ಎಸ್.ಸಿ. ನಂ. 5017/2022**

**ಪ್ರಾಸಾ -- 14**
**ಚಾಸಾ – 20**

ಸಾಕ್ಷಿಯ ಹೆಸರು– ಮೈಲ್-ಸ್ವಾಮಿ

ತಂದೆಯ ಹೆಸರು – ಗುರುಸ್ವಾಮಿ

ವಯಸ್ಸು – 44 ವರ್ಷ

ವೃತ್ತಿ – ಮೇಸ್ತ್ರಿ ಕೆಲಸ

ವಿಳಾಸ – ಹೂಗ್ಯ, ಚಾಮರಾಜನಗರ ಜಿಲ್ಲೆ

ದಿಃ 19.03.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ**

1. ನನಗೆ ಈಗ ವಾಟ್ಸ ಅಪ್ ವಿಡಿಯೋ ಕಾಲ್ ಮುಖಾಂತರ ತೋರಿಸಿದ ವ್ಯಕ್ತಿಗಳ ಪರಿಚಯ ಇಲ್ಲ. ನಾನು ಈಗ್ಗೆ ಸುಮಾರು 5 ವರ್ಷಗಳ ಹಿಂದೆ ಬೊಯಿಕೇರಿ ಗ್ರಾಮದಲ್ಲಿರುವ ನನ್ನ ಮಾವ ಕುಪ್ಪುಸ್ವಾಮಿ ರವರ ಮನೆಯಲ್ಲಿ ವಾಸವಾಗಿದ್ದೆ. ನಾನು ಕಾರ್ಮಿಕರನ್ನು ಕರೆದುಕೊಂಡು ರಸ್ತೆಯ ಹಾಗೂ ಚರಂಡಿಯ ಕೆಲಸಗಳನ್ನು ಮಾಡಿಸುತ್ತಿದ್ದೆ. ನನ್ನೊಂದಿಗೆ ಹಿಂದಿ ಮಾತನಾಡುವ ಸುಮಾರು 3-4 ಜನ ಹಾಗೂ ಕೃಷ್ಣಮೂರ್ತಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ವಿ ಬಾಡಗದಲ್ಲಿರುವ ಪೂಣಚ್ಚರವರ ಲೈನ್ ಮನೆಯಲ್ಲಿ ನಾನು ಕೂಲಿ ಕಾರ್ಮಿಕರು ತಂಗಲು ವ್ಯವಸ್ಥೆ ಮಾಡಿದ್ದೆ. ಕೃಷ್ಣಮೂರ್ತಿ ನನಗೆ ಫೋನ್ ಮಾಡಿ ಲೈನ್ ಮನೆಯ ಬಳಿ ಗಲಾಟೆ ಆಗಿದೆ ಎಂದು ಹೇಳಿದ್ದರು, ಏನೂ ಗಲಾಟೆ ಆಗಿದೆ ಎಂದು ವಿವರವಾಗಿ ಹೇಳಿಲ್ಲ. ಯಾರೋ ಬಂದು ನಮಗೆ ತೊಂದರೆ ಮಾಡಿದರು ಎಂದು ಹೇಳಿದರು. ಆ ಸಮಯದಲ್ಲಿ ನಾನು ನನ್ನ ಊರು ಹೂಗ್ಯದಲ್ಲಿ ಇದ್ದೆ. ನನ್ನ ಬಳಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ಪೂಣಚ್ಚ ರವರ ಲೈನ್ ಮನೆಯಲ್ಲಿ ಗಲಾಟೆಯಾಗಿದ್ದರಿಂದ ಆ ಮನೆಯನ್ನು ಸಮುದಾಯ ಭವನಕ್ಕೆ ಬಂದು ಅಲ್ಲಿ ತಂಗಿದ್ದರು. ನಾನು ಹೂಗ್ಯದಿಂದ ಸಮುದಾಯ ಭವನಕ್ಕೆ ಬಂದಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲ. ನನ್ನ ಬಳಿ ಕೆಲಸ ಮಾಡುತ್ತಿದ್ದ ಕಾರ್ಮಿಕರು ನನಗೆ ಏನೂ ಹೇಳಿರುವುದಿಲ್ಲ. ಕೃಷ್ಣಮೂರ್ತಿ ನನಗೆ ಯಾವುದೇ ವಿಚಾರವನ್ನು ಹೇಳಿಲ್ಲ. ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)**

## ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

2. ನನ್ನ ಜೊತೆ ಕೆಲಸ ಮಾಡುತ್ತಿದ್ದ ಕೆಲಸಗಾರರರು ಮಧ್ಯಪ್ರದೇಶದ ಅನೀಲ್ ಸಿಂಗ್, ಲಾಲ್ ದೇವ್ ಸಿಂಗ್, ಆನಂದ್ ಪ್ರತಾಪ್ ಸಿಂಗ್ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಅವರ ಹೆಸರುಗಳು ಗೊತ್ತಿಲ್ಲ. ದಿಃ 03.03.2022 ರಂದು ಬೆಃ 7.30 ಗಂಟೆಗೆ ನನಗೆ ಕೃಷ್ಣಮೂರ್ತಿಯವರು ಫೋನ್ ಮಾಡಿ ಅವರು ವಾಸವಿದ್ದ ಲೈನ್ ಮನೆಯ ಮತ್ತೊಂದು ಭಾಗದಲ್ಲಿ ಒಬ್ಬ ಹೆಂಗಸು ವಾಸವಾಗಿದ್ದು, ನಿನ್ನೆ ದಿನ ರಾತ್ರಿ ಇಬ್ಬರು ವ್ಯಕ್ತಿಗಳು ಆ ಮನೆಗೆ ಬಂದಿದ್ದು, ನಾನು ಅವರನ್ನು ಯಾರು ನೀವು ಇಷ್ಟು ಹೊತ್ತಿಗೆ ಇಲ್ಲಿಗೆ ಏಕೆ ಬಂದಿದ್ದೀರಿ ಎಂದು ವಿಚಾರಿಸಿದ್ದು ಆಗ ಅವರು ಆ ಲೈನ್ ಮನೆಯಲ್ಲಿರುವ ಮಹಿಳೆ ನಮ್ಮ ಸಂಬಂಧಿಕರು, ಇದು ನಮ್ಮ ಕುಟುಂಬದ ವಿಚಾರ, ನೀವು ಹೋಗಿ ಮಲಗಿಕೊಳ್ಳಿ ಎಂದು ನನಗೆ ಬೆದರಿಸಿದ್ದು, ನಾವು 4 ಜನ ಲೈನ್ ಮನೆಯ ಒಳಗೆ ಹೋಗಿ ಮಲಗಿಕೊಂಡಿದ್ದು, ಆ ಸಮಯದಲ್ಲಿ ಪಕ್ಕದ ಲೈನ್ ಮನೆಯಲ್ಲಿ ಗಲಾಟೆಯಾದ ಶಬ್ದ ಕೇಳಿಸುತ್ತಿತ್ತು, ರಾತ್ರಿ ಬಂದಿದ್ದ ಇಬ್ಬರು ವ್ಯಕ್ತಿಗಳು ನಮ್ಮ ಕುಟುಂಬದ ವಿಚಾರದಲ್ಲಿ ತಲೆ ಹಾಕಬೇಡ ಎಂದು ಬೆದರಿಸಿದ್ದರಿಂದ ನಾವು ಹೆದರಿ ಸುಮ್ಮನಿದ್ದೆವು, ಮಾರನೇ ದಿನ ಬೆಳಿಗ್ಗೆ ನೋಡಿದಾಗ ಪಕ್ಕದ ಲೈನ್ ಮನೆಯಲ್ಲಿದ್ದ ಹೆಂಗಸು ಮನೆಯ ಹೊರಗಡೆ ಒರಾಂಡದಲ್ಲಿ ಇದ್ದು ಆಕೆಯ ಗಂಟಲಿನಲ್ಲಿ ಗಾಯವಾಗಿ ರಕ್ತ ಬರುತ್ತಿದ್ದು ನಾವು ಮಾತನಾಡಿಸಿದಾಗ ಸರಿಯಾಗಿ ಮಾತನಾಡದೇ ತೊದಲುತ್ತ ಇಬ್ಬರು ಎಂದು ತೋರಿಸಿ ಕುತ್ತಿಗೆ ಕುಯ್ದ ಬಗ್ಗೆ ಕೈ ಸನ್ನೆ ಮಾಡಿದ್ದು, ರಾತ್ರಿ ಬಂದಿದ್ದ ಇಬ್ಬರು ವ್ಯಕ್ತಿಗಳು ಈಗ ಕಾಣಿಸುತ್ತಿಲ್ಲ, ನಮಗೆ ಈ ಲೈನ್ ಮನೆಯಲ್ಲಿ ಇರಲು ಹೆದರಿಕೆ ಆಗುತ್ತಿದೆ, ನಾವು ಇಲ್ಲಿ ಇರುವುದಿಲ್ಲ ಎಂದು ನನಗೆ ಹೇಳಿದ್ದು, ಆಗ ನಾನು ಕೃಷ್ಣಮೂರ್ತಿಯವರ ಬಳಿ ನೀವು ಎಲ್ಲಿಗೂ ಹೋಗಬೇಡಿ, ನಾನು ಬರುವವರೆಗೆ ಅಲ್ಲಿಯೇ ಇರಿ, ನಾನು ಬಂದು ವಿಚಾರಿಸುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಾನು ಲೈನ್ ಮನೆಯ ಬಳಿಗೆ ಹೋಗಿ ನೋಡಿದಾಗ ಕೃಷ್ಣಮೂರ್ತಿ ಹಾಗೂ ಮಧ್ಯಪ್ರದೇಶದ

ಆ ಮೂರು ವ್ಯಕ್ತಿಗಳು  ಲೈನ್ ಮನೆಯಲ್ಲಿ ಇರಲಿಲ್ಲ ಹಾಗೂ ಪಕ್ಕದ ಲೈನ್ ಮನೆಯಲ್ಲಿ ಕೂಡ ಯಾರೂ ಕಾಣಿಸಿರಲಿಲ್ಲ, ಆದ ಕಾರಣ ನಾನು ಕೃಷ್ಣಮೂರ್ತಿಗೆ ಫೋನ್ ಮಾಡಿ ಕೇಳಿದಾಗ ಆತ ಲೈನ್ ಮನೆ ಖಾಲಿ ಮಾಡಿ ಸಮುದಾಯ ಭವನದಲ್ಲಿ ಇರುವುದಾಗಿ ಹೇಳಿದ್ದರಿಂದ ನಾನು ಅಲ್ಲಿಗೆ ಹೋಗಿ ನೋಡಿರುತ್ತೇನೆ ಎಂದರೆ ಸರಿಯಲ್ಲ.  ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ದಿಃ 02.03.2022 ರಂದು ರಾತ್ರಿ  ಕೃಷ್ಣಮೂರ್ತಿ ಹಾಗೂ  3 ಜನ ಮಧ್ಯಪ್ರದೇಶದವರು ವಾಸವಾಗಿದ್ದ ಲೈನ್ ಮನೆಯ ಇನ್ನೊಂದು ಭಾಗದಲ್ಲಿ ವಾಸವಾಗಿದ್ದ ಹೆಂಗಸನ್ನು ಆ ಇಬ್ಬರು ವ್ಯಕ್ತಿಗಳು ಸೇರಿಕೊಂಡು ಯಾವುದೋ ದುರುದ್ದೇಶದಿಂದ ಕುತ್ತಿಗೆ ಕಡಿದು ಗಾಯಗೊಳಿಸಿರಬಹುದು ಎಂದು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.  ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 09.03.2022 ರಂದು ನನಗೆ ಈಗ ಓದಿ ಹೇಳಿದಂತೆ " ನಾನು ——— ಸಂಶಯವಿರುತ್ತದೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ  ನಿಪಿ 39 ಎಂದು ಗುರುತಿಸಲಾಯಿತು.  ನಿಪಿ 39 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು  ಗೈರು ಹಾಜರು**

**ಮರು  ವಿಚಾರಣೆ ಇಲ್ಲ**.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)